ಶ್ರೀ ಆರ್.ಬಿ. ಪೋತ್‌ದಾರ್. —ಇದರ ಬಗ್ಗೆ ಪರಿಶೀಲನೆ ಹೇಗೆ ಮಾಡಬೇಕು ಎಂಬ ಬಗ್ಗೆ ತೀರ್ಮಾನ ಮಾಡಲು ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಲಾಗಿದೆ. ಕ್ಯಾಬಿನೆಟ್ ಸಬ್ ಕಮಿಟಿಯು ಅದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಮಂತ್ರಿಯವರು ಸಹ ಈ ಮೊದಲು ಕೋ-ಆಪರೇಟಿವ್ ಸಂಸ್ಥೆಗಳಲ್ಲಿ ಕೆಲಸ ಮಾಡಿ ಅನುಭವವನ್ನು ಪಡೆದುಕೊಂಡಿದ್ದಾರೆ. ಆಗ ನಮ್ಮ ರಾಜ್ಯದಲ್ಲಿರುವ ಕೋ-ಆಪರೆಟಿವ್ ಸೆಕ್ಟಾರ್‌ಗಳು ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲಿ ಹೋಗಿಬಿಟ್ಟಿವೆ. ಹೀಗೆ ಬಿಟ್ಟರೆ ಮುಂದಕ್ಕೆ ಯಾವ ಸರ್ಕಾರ ಬಂದರೂ ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ, ಕೋ ಆಪರೇಟಿವ್ ಸೆಕ್ಟಾರ್‌ಗಳ ಲೆಕ್ಕಪತ್ರಗಳನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯು ಮುಂದೆ ತನ್ನ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಮುಂದೆ ತರುವುದಕ್ಕೆ ಏನು ತೊಂದರೆ ಇದೆ ? ಇದರ ಕಾನೂನಿಗೆ ತಿದ್ದುಪಡಿ ತರಲಿಕ್ಕೆ ಏನು ತೊಂದರೆ ಇದೆ ?

ಶ್ರೀ ಆರ್.ಬಿ. ಪೋತ್‌ದಾರ್.—ಕ್ಯಾಬಿನೆಟ್ ಸಬ್ ಕಮಿಟಿಯು ಇದರ ಬಗ್ಗೆ ಒಂದು ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ದುರ್ದೈವದಿಂದ ನಮ್ಮ ರಾಜ್ಯದಲ್ಲಿ ಕೋ-ಆಪರೇಟಿವ್ ಸೆಕ್ಟಾರ್‌ಗಳು ಅನೇಕ ವರ್ಷಗಳಿಂದ ನಷ್ಟವನ್ನು ಅನುಭವಿಸಿಕೊಂಡು ಬರುತ್ತಿವೆ. ಕೋ-ಆಪರೇಟಿವ್ ಸೆಕ್ಟಾರ್‌ಗಳಲ್ಲಿ ಮೂಲ ದೋಷ ಎಲ್ಲಿದೆ, ಹಾಗೂ ಈ ದೋಷಗಳನ್ನು ಸರಿಪಡಿಸಬೇಕಾದರೆ ಏನು ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ತೀರ್ಮಾನ ಮಾಡುವುದಕ್ಕೆ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಲಾಗಿದೆ. ಸಹಕಾರ ರಂಗಗಳು ವಿಫಲವಾದರೆ ಗ್ರಾಮಾಂತರ ಜನಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದನ್ನೆಲ್ಲಾ ಗಂಭೀರವಾಗಿ ಆಲೋಚನೆ ಮಾಡಬೇಕು. ಕ್ಯಾಬಿನೆಟ್ ಸಬ್ ಕಮಿಟಿ ರಿಪೋರ್ಟ್ ಬಂದ ಮೇಲೆ ಆ ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೂ ತರುತ್ತೇವೆ.

ಅಧ್ಯಕ್ಷರು.—ಈಗ ಆರ್-ಎನ್. ನಾಯಕ್‌ರವರ ಪ್ರಶ್ನೆ.

ಉತ್ತರ ಕನ್ನಡ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘಗಳ ಕಾರ್ಯದರ್ಶಿಗಳ ವರ್ಗಾವಣೆ ಕುರಿತು.

ಳರ್ಕ. **ಶ್ರೀ ಆರ್. ಎನ್. ನಾಯ್ಕ.** (ಭಟ್ಕಳ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸೇವಾ ಸಹಕಾರಿ ಸಂಘಗಳೆಷ್ಟು, ಹಾಗೂ ಅವುಗಳಲ್ಲಿರುವ ಕಾರ್ಯದರ್ಶಿಗಳ ಸಂಖ್ಯೆ ಎಷ್ಟು ?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಸೇವಾ ಸಹಕಾರಿ ಸಂಘಗಳೆಷ್ಟು ಹಾಗೂ ಕಾರ್ಯದರ್ಶಿಗಳ ಸಂಖ್ಯೆ ಎಷ್ಟು ?

ಇ) ಪ್ರಾಥಮಿಕ ಸೇವಾ ಸಹಕಾರಿ ಸಂಘಗಳ ಕಾರ್ಯದರ್ಶಿಗಳನ್ನು ವರ್ಗಾಯಿಸುವ ಅಧಿಕಾರ ಯಾರಿಗಿದೆ ;

ಈ) ಉತ್ತರ ಕನ್ನಡ ಜಿಲ್ಲೆಯಲ್ಲಿ ೧೯೮೫ರಿಂದ ಈ ತನಕ ಎಷ್ಟು ಕಾರ್ಯದರ್ಶಿಗಳನ್ನು ವರ್ಗಾಯಿಸಲಾಗಿದೆ ?

ಶ್ರೀ ಎಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ದಿನಾಂಕ ೩೦-೬-೮೬ಕ್ಕೆ ಅಂತ್ಯಗೊಂಡಂತೆ ರಾಜ್ಯದಲ್ಲಿ ಒಟ್ಟು ೪೭೭೭ ಕೃಷಿ ಸೇವಾ ಸಹಕಾರ ಸಂಘಗಳು ಇವೆ.

ಅವುಗಳಲ್ಲಿರುವ ಕಾರ್ಯದರ್ಶಿಗಳ ಸಂಖ್ಯೆ ೪೭೭೭,

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ೧೬೩ ಪ್ರಾಥಮಿಕ ಕೃಷಿ ಸೇವಾ ಸಹಕಾರ ಸಂಘಗಳು ಇವೆ, ಒಟ್ಟು ೧೬೩ ಕಾರ್ಯದರ್ಶಿಗಳಿರುತ್ತಾರೆ.

ಇ) ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಕಾರ್ಯದರ್ಶಿಗಳನ್ನು ವರ್ಗಾಯಿಸುವ ಅಧಿಕಾರ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಿಗೆ ಇದೆ.

ಈ) ಉತ್ತರ ಕನ್ನಡ ಜಿಲ್ಲೆಯಲ್ಲಿ ೧೯೮೫ ರಿಂದ ಈ ತನಕ ಒಟ್ಟು ೨೧ ಕಾರ್ಯದರ್ಶಿಗಳನ್ನು ವರ್ಗಾವಣೆ ಮಾಡಲಾಗಿದೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ೧೬೩ ಪ್ರಾಥಮಿಕ ಸೇವಾ ಸಹಕಾರ ಸಂಘಗಳಿವೆ. ಹಾಗೂ ೧೬೩ ಮಂದಿ ಸಕ್ರೆಟರಿಗಳು ಇದ್ದಾರೆಂದು ತಿಳಿಸಿದ್ದಾರೆ. ಈ ೧೬೩ ಜನರ ಪೈಕಿ ೨೧ ಜನ ಕಾರ್ಯದರ್ಶಿಗಳನ್ನು ವರ್ಗಾವಣೆ ಮಾಡಲಾಗಿದೆ ಎಂದು ಸಹ ತಿಳಿಸಿದ್ದಾರೆ. ಈ ಸೇವಾ ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿರುವ ಒಟ್ಟು ೪೭೭೭ ಕಾರ್ಯದರ್ಶಿಗಳೇನಿದ್ದಾರೆ, ಇವರಿಗೆ ಸರಕಾರದ ನೌಕರರಿಗೆ ಯಾವ ನಿಯಮಾವಳಿಗಳು ಅನ್ವಯವಾಗುತ್ತವೆಯೋ ಅದೇ ನಿಯಮಗಳು ಈ ಕಾರ್ಯದರ್ಶಿಗಳಿಗೂ ಅನ್ವಯವಾಗುತ್ತದೆಯೇ ? ಸರ್ಕಾರಿ ನೌಕರರಿಗೆ ಯಾವ ರೀತಿ ಸೌಲಭ್ಯಗಳು ಸಿಗುತ್ತವೆಯೋ, ಅದೇ ರೀತಿ ಇವರುಗಳಿಗೂ ಸಿಗುತ್ತದೆಯೇ ಎಂದು ತಿಳಿಸಬೇಕು.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ೧೬೩ ಜನ ಕಾರ್ಯದರ್ಶಿಗಳು ಇದ್ದಾರೆ ಅವರಲ್ಲಿ ೨೧ ಜನರನ್ನು ಮಾತ್ರ ವರ್ಗಾವಣೆ ಮಾಡಲಾಗಿದೆ. ಬೇರೆಯವರನ್ನು ವರ್ಗಾವಣೆ ಮಾಡಬಾರದೆಂದು ನಾವು ಹೇಳಿಲ್ಲ. ಯಾವ ಕಾರ್ಯದರ್ಶಿಗಳಾದರೂ ಸರಿಯಾಗಿ ಕೆಲಸ ಮಾಡದಿದ್ದರೆ ಹಾಗೂ ಏನಾದರೂ ಅವರುಗಳ ಮೇಲೆ ದೂರುಗಳು ಇದ್ದರೆ ಅವುಗಳನ್ನು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುವಂತೆ ತಿಳಿಸುತ್ತೇನೆ. ಯಾರು ಸರಿಯಾಗಿ ಕೆಲಸ ಮಾಡುವುದಿಲ್ಲವೋ ಆ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಇನ್ನು ಅಲ್ಲಿ ಕೆಲಸ ಮಾಡುವ ೪೭೭೭ ಜನ ನೌಕರರಿಗೆ ಸರ್ಕಾರಿ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳು ಸಿಗುತ್ತಿವೆಯೇ ಎಂದು ಕೇಳಿದರು. ಆ ಬಗ್ಗೆ ನಾನು ಹೇಳುವುದಾದರೆ ಅದು ಆಯಾಯಾ ಪ್ರಾಥಮಿಕ ಸೇವಾ ಸಹಕಾರಿ ಸಂಘಗಳ ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ, ಇನ್ನು ಮಾನ್ಯ ಸದಸ್ಯರು ಏನೊಂದು ಪ್ರಶ್ನೆ ಕೇಳಿದ್ದಾರೆ ಆ ಬಗ್ಗೆ ಆಯಾಯಾ ಪ್ರಾಥಮಿಕ ಸೇವಾ ಸಹಕಾರಿ ಸಂಘದ ಹಣಕಾಸಿನ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್, ಎನ್. ನಾಯಕ್.—ಮಾನ್ಯ ಸಭಾಪತಿಯವರೇ, ನನಗೆ ಬೇಕಾದ ಉತ್ತರವೇನೆಂದರೆ ಸರ್ಕಾರಿ ನೌಕರರಿಗೆ ಸಿಗತಕ್ಕಂಥ ಯಾವ ಯಾವ ಸೌಲಭ್ಯಗಳು ಅವರಿಗೆ ಸಿಗುತ್ತಿವೆ ? ಯಾವ ಯಾವ ಸೌಲಭ್ಯಗಳು ಅವರಿಗೆ ಸಿಗುತ್ತಿಲ್ಲ. ಮತ್ತು ಯಾವ ಯಾವ ಸೌಲಭ್ಯಗಳು ಸಿಗುತ್ತಿಲ್ಲವೋ ಆ ಬಗ್ಗೆ ಏನಾದರೂ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಏಕಾಂತಯ್ಯ.—ಸರ್ಕಾರಿ ನೌಕರರಿಗೆ ಸಿಗತಕ್ಕಂಥ ಎಲ್ಲಾ ಸೌಲಭ್ಯಗಳನ್ನು ಪ್ರಾಥಮಿಕ ಸೇವಾ ಸಹಕಾರಿ ಸಂಘಗಳ ನೌಕರರಿಗೆ ಕೊಡಲು ಸಾಧ್ಯವಿಲ್ಲ ಕಾರಣ ಅವುಗಳ ವೆಚ್ಚವನ್ನು ಆಯಾಯಾ ಪ್ರಾಥಮಿಕ ಸೇವಾ ಸಹಕಾರ ಸಂಘಗಳೇ ಭರಿಸಬೇಕಾಗುತ್ತದೆ. ಆದ್ದರಿಂದ ಎಲ್ಲಾ ಸೌಲಭ್ಯಗಳನ್ನು ಕೊಡಲು ಸಾಧ್ಯವಿಲ್ಲ. ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುತ್ತೇನೆ ಆ ನೌಕರರಿಗೆ ಕೊಡತಕ್ಕಂಥ ಸೌಲಭ್ಯಗಳನ್ನು ಆಯಾಯಾ ಪ್ರಾಥಮಿಕ ಸೇವಾ ಸಂಘಗಳೇ ಭರಿಸಬೇಕಾಗಿರುವುದರಿಂದ ಅವುಗಳ ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಮುಚ್ಚಲ್ಪಟ್ಟ ಕೈಗಾರಿಕೆಗಳಿಂದಾಗಿರುವ ನಿರುದ್ಯೋಗಿಗಳು

೧೯೩. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ ?